ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಬರುವುದೇ ಅಪರೂಪ. ಅದು ಬಂದಂತಹ ಸಂದರ್ಭದಲ್ಲಿ ಸಮಯ ಕೇಳಿಬಿಟ್ಟರೆ ನಮ್ಮ ಪರಿಸ್ಥಿತಿ ಏನು? ಸಿಂಪಲ್ ಪ್ರಶ್ನೆ ಇದೆ. ಬಹಳ ಕಠಿಣವಾದುದ್ದಲ್ಲ. ರಾಜ್ಯದ ಎಲ್ಲಾ ಕಡೆಯಿಂದ ಹುಡುಕಿ ಉತ್ತರ ತರಿಸಬೇಕಾದ್ದು ಏನೂ ಇಲ್ಲ. ಇಲಾಖೆಯಲ್ಲಿ ಇಲ್ಲಿಯೇ ಸಿಗುವಂತಹದ್ದು. ಬಹಳ ಹಗುರವಾದ ಪ್ರಶ್ನೆ ಇದೆ. ಪ್ರಶ್ನೆ ಬಹಳ ಸರಳವಾದುದಾಗಿದೆ.

ಅಧ್ಯಕ್ಷರು : ಏನೋ ಗ್ರಹಗತಿ ವ್ಯತ್ಯಾಸವಿರಬೇಕು ನೋಡೋಣ. ತಾವು ಪ್ರಶ್ನೆ ಹಾಕಿದ್ದೀರಿ ಅವರು ಸಮಯ ಕೇಳಿದ್ದಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಅಧ್ಯಕ್ಷರೇ, ತಾವು ನೋಡಿದರೆ ಗೊತ್ತಾಗುತ್ತದೆ ಪ್ರಶ್ನೆ ಎಷ್ಟು ಸರಳವಾಗಿದೆಯೆಂದು. ಅದರ ಅಂಕಿಸಂಖ್ಯೆಯನ್ನು ರಾಜ್ಯದಿಂದ ಸಂಗ್ರಹಿಸಬೇಕಾದದ್ದು ಏನೂ ಇಲ್ಲ. ಅಂಕೋಲ ಕ್ಷೇತ್ರದಲ್ಲಿ ಯಲ್ಲಾಪುರ ಮತ್ತು ಅಂಕೋಲಗಳಲ್ಲಿ ಮನೆ ಬೇಕೆನ್ನುವ ಬೇಡಿಕೆಯಿದೆ. ಜಾಗ ಸಹ ಇದೆ. ಈ ಹಿನ್ನೆಲೆಯಲ್ಲಿ ಮನೆ ಕಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆನ್ನುವುದು ಬೇಕು ಅಷ್ಟೆ.

ಅಧ್ಯಕ್ಷರು : ನಾಳೆ ನಾಡಿದ್ದರಲ್ಲಿ ಯಾವಾಗಲಾದರೂ ತಡೆಹಿಡಿಯಲಾದ ಪ್ರಶ್ನೆಗಳಲ್ಲಿ ಸೇರಿಸಿಕೊಳ್ಳಲಾಗುವುದು.

ವರ್ತೂರು ಕ್ಷೇತ್ರದಲ್ಲಿ ಹುಡ್ಕೋ ಯೋಜನೆ.

368 - ಶ್ರೀ ಅಶ್ವತ್ಥನಾರಾಯಣ ರೆಡ್ಡಿ (ವರ್ತೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಿಂದ ಹುಡ್ಕೋ ಸಾಲದ ಯೋಜನೆಯಲ್ಲಿ ಗಜೇಂದ್ರ ನಗರದಲ್ಲಿ ನಿರ್ಮಿಸಿರುವ ಮನೆಗಳು ಎಷ್ಟು?*

ಆ) *ಅವುಗಳಲ್ಲಿ ಅಧಿಕೃತವಾಗಿ ಎಷ್ಟು ಮನೆಗಳನ್ನು ಹಂಚಲಾಗಿರುತ್ತದೆ. ಹಂಚದೆ ಬಾಕಿ ಇರುವ ಮನೆಗಳ ಸಂಖ್ಯೆ ಎಷ್ಟು? ಅಕ್ರಮವಾಗಿ ವಾಸಿಸುತ್ತಿರುವವರ ಮನೆಗಳು ಎಷ್ಟು?*

ಇ) *ಮೊದಲನೇ ಹಂತದಲ್ಲಿ ಕಟ್ಟಿದ ಮನೆಗಳ ನಿರ್ಮಾಣದ ವೆಚ್ಚವಷ್ಟು, 2ನೇ ಹಂತದಲ್ಲಿ ಕಟ್ಟಿದ ನಿರ್ಮಾಣದ ವೆಚ್ಚ ಎಷ್ಟು?*

ಈ) *ಈ ಮನೆಗಳಲ್ಲಿ ವಾಸಿಸುವವರು ಸಾಲ ಕಟ್ಟಲು ಶಕ್ತಿ ಇಲ್ಲದೆ ಮನ್ನಾ ಮಾಡಬೇಕೆಂತಲೂ ಅಥವಾ ಕಡಿಮೆ ಮಾಡಬೇಕೆಂದು ಕೋರಿರುತ್ತಾರೆಯೇ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಗಜೇಂದ್ರನಗರ ಕೊಳಚೆ ಪ್ರದೇಶದಲ್ಲಿ ಹುಡ್ಕೋ ಸಾಲದ ನೆರವಿನಿಂದ ಮಂಡಳಿಯು

ಒಟ್ಟು 297 ಮನೆಗಳನ್ನು ನಿರ್ಮಿಸಲಾಗಿದೆ. ಅವುಗಳೆಂದರೆ;

ಒಂದನೇ ಹಂತ	-	49
ಎರಡನೇ ಹಂತ	-	64
ಮೂರನೇ ಹಂತ	-	64
ನಾಲ್ಕನೇ ಹಂತ	-	120

ಆ) ಅಧಿಕೃತವಾಗಿ ಹಂಚಿಕೆಯಾಗಿರುವ ಮನೆಗಳು 296. 1 ಮನೆ ಮಾತ್ರ ಹಂಚದೇ ಬಾಕಿ ಉಳಿದಿರುತ್ತದೆ. ಅಕ್ರಮವಾಗಿ ಯಾರೂ ವಾಸಿಸುತ್ತಿಲ್ಲ.

ಇ) ಒಂದನೇ ಹಂತದಲ್ಲ ನಿರ್ಮಿಸಿರುವ 49 ಮನೆಗಳಿಗೆ ವೆಚ್ಚ ಮಾಡಿರುವ ಹಣ ಒಟ್ಟು ರೂ. 663725.00 ಎರಡನೇ ಹಂತದಲ್ಲಿ ನಿರ್ಮಿಸಿರುವ 64 ಮನೆಗಳಿಗೆ ವೆಚ್ಚ ಮಾಡಿರುವ ಹಣ ಒಟ್ಟು ರೂ. 1336546.00

ಈ) ಹುಡ್ಕೋ ಸಾಲದ ನೆರವಿನಿಂದ ಈ ಮನೆಗಳನ್ನು ನಿರ್ಮಿಸಲಾಗಿದ್ದು, ಹುಡ್ಕೋ ಸಂಸ್ಥೆಯ ನಿಬಂಧನೆ ಮೇರೆಗೆ ಬಡ್ಡಿಯ ಹಣವೂ ಸೇರಿದಂತೆ 20 ವರ್ಷಗಳ ಅವಧಿಗೆ ಒಂದನೇ ಹಂತದ ಮನೆಗಳಿಗೆ ಮಾಸಿಕ 171.00 ರೂಪಾಯಿಗಳನ್ನು ಹಾಗೂ ಎರಡನೇ ಹಂತದ ಮನೆಗಳಿಗೆ ಮಾಸಿಕ 250.00 ರೂಪಾಯಿಗಳನ್ನು ನಿಗಧಿಪಡಿಸಲಾಗಿದೆ. ಮಾಸಿಕ ಕಂತಿನಲ್ಲಿ ನಿಗಧಿಪಡಿಸಿರುವ ಹಣ ಅಧಿಕವೆಂದು ಕೊಳಚೆ ನಿವಾಸಿಗಳು ಮನವಿ ಸಲ್ಲಿಸಿ ಕಡಿಮೆ ಮಾಡಲು ಕೋರಿರುತ್ತಾರೆ. ಹುಡ್ಕೋ ಸಂಸ್ಥೆಯ ನಿಬಂಧನೆಗಳಿಗೊಳಪಟ್ಟು ಈ ಯೋಜನೆಗೆ ಸಾಲ ಪಡೆದು ಮನೆಗಳನ್ನು ನಿರ್ಮಿಸಿದ್ದು, ಬಡ್ಡಿ ಸಮೇತ ಹಣ ಮರುಪಾವತಿಸಬೇಕಾದ ಕಾರಣ ನಿವಾಸಿಗಳ ಬೇಡಿಕೆಯಂತೆ ಸಾಲ ಮನ್ನಾ ಮಾಡುವ ಬಗ್ಗೆ ಅಥವಾ ಕಡಿಮೆ ಮಾಡುವ ಬಗ್ಗೆ ಪರಿಗಣಿಸಲು ಬರುವುದಿಲ್ಲ.

ಶ್ರೀ ಅಶ್ವತ್ಥನಾರಾಯಣ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಕೊಳಚೆ ನಿರ್ಮೂಲನ ಮಂಡಳಿಯಿಂದ ಹುಡ್ಕೋ ಸಾಲದ ಯೋಜನೆಯಲ್ಲಿ ವರ್ತೂರು ಕ್ಷೇತ್ರ ಗಜೇಂದ್ರ ನಗರದಲ್ಲಿ ನಿರ್ಮಿಸಿರುವ ಮನೆಗಳು ಎಷ್ಟು ಎಂದು ಉತ್ತರ ಒದಗಿಸಿದ್ದಾರೆ. ಆಮೇಲೆ ಮೊದಲನೆಯ ಹಂತದಲ್ಲಿ ಕಟ್ಟಿದ ಮನೆಗಳ ನಿರ್ಮಾಣದ ವೆಚ್ಚವೆಷ್ಟು? ಎರಡನೆಯ ಹಂತದಲ್ಲಿ ಕಟ್ಟಿದ ಮನೆಗಳ ನಿರ್ಮಾಣದ ವೆಚ್ಚವೆಷ್ಟು?ಸಾಲದ ಹಣವನ್ನು ಮರುಪಾವತಿ ಮಾಡಲಿಕ್ಕೆ ತಾರತಮ್ಯ ಮಾಡಲಾಗಿದೆ. ಈ ಹಣಕ್ಕೆ ಬಡ್ಡಿಯನ್ನು ಮನ್ನಾ ಮಾಡಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಮ್ಮ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ವಿಚಾರ ಮಾಡಿ ಬಡ್ಡಿ ಮನ್ನಾ ಮಾಡುವ ಬಗ್ಗೆ ಯೋಚನೆ ಮಾಡುತ್ತೇನೆ.

ತಡೆಹಿಡಿಯಲಾದ ಪ್ರಶ್ನೆ 18ನೇ ಪಟ್ಟಿ ದಿನಾಂಕ 24.4.98